CCE-II-RR/PR/PF/NSR/NSPR(A)/888/4043

**A**

**ಜೂನ್ 2024 ರ ಪರೀಕ್ಷೆ - 2**

**JUNE 2024 EXAMINATION - 2**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**ಸಂಕೇತ ಸಂಖ್ಯೆ : 97-K**
**Code No. : 97-K**

**CCE RR/PR/PF/ NSR/NSPR**
**FULL SYLLABUS**

Question Paper Serial No.

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / Private Fresh / NSR / NSPR)**

ದಿನಾಂಕ : 20. 06. 2024 ] [ Date : 20. 06. 2024

ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**20. 06. 2024**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಸಂವಿಧಾನದ ರಚನಾ ಸಭೆಯಲ್ಲಿ ಧ್ಯೇಯಗಳ ನಿರ್ಣಯವನ್ನು ಮಂಡಿಸಿದವರು

(A) ಡಾ. ಬಾಬುರಾಜೇಂದ್ರ ಪ್ರಸಾದ್

(B) ಕೆ.ಎಂ. ಮುನ್ಷಿ

(C) ಜವಾಹರಲಾಲ್ ನೆಹರೂ

(D) ಡಾ. ಬಿ.ಆರ್. ಅಂಬೇಡ್ಕರ್

2. ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಅಳವಡಿಸಲಾಗಿರುವ ಸಂವಿಧಾನದ ಭಾಗ

(A) 4ನೇ ಭಾಗ

(B) 6ನೇ ಭಾಗ

(C) 3ನೇ ಭಾಗ

(D) 8ನೇ ಭಾಗ

3. ರಾಜ್ಯಸಭೆಯ ಪದನಿಮಿತ್ತ ಅಧ್ಯಕ್ಷರು

(A) ರಾಷ್ಟ್ರಪತಿ

(B) ಉಪರಾಷ್ಟ್ರಪತಿ

(C) ಪ್ರಧಾನ ಮಂತ್ರಿ

(D) ಸಂಪುಟ ದರ್ಜೆಯ ಮಂತ್ರಿ

4. ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ಸಮಾಜವಾದಿ ಚಿಂತನೆಯನ್ನು ಆಧರಿಸಿರುವ ತತ್ವ

(A) ಸಮಾನ ಕೆಲಸಕ್ಕೆ ಸಮಾನ ವೇತನ

(B) ಪಾನ ನಿಷೇಧ ಜಾರಿ

(C) ಉಚಿತ ಮತ್ತು ಕಡ್ಡಾಯ ಶಿಕ್ಷಣ

(D) ಐತಿಹಾಸಿಕ ಸ್ಮಾರಕ ಮತ್ತು ವಸ್ತುಗಳ ಸಂರಕ್ಷಣೆ

5. ಭಾರತದ ಸರ್ವೋಚ್ಚ ನ್ಯಾಯಾಲಯ ಇರುವ ಸ್ಥಳ

(A) ನವದೆಹಲಿ

(B) ಮುಂಬೈ

(C) ಚೆನ್ನೈ

(D) ಕೋಲ್ಕತ್ತಾ

6. ಲೋಕಸಭಾ ಸದಸ್ಯರ ಅಧಿಕಾರದ ಅವಧಿ

(A) 6 ವರ್ಷಗಳು

(B) 5 ವರ್ಷಗಳು

(C) 2 ವರ್ಷಗಳು

(D) 10 ವರ್ಷಗಳು

7. ಸರ್ವೋಚ್ಚ ನ್ಯಾಯಾಲಯದ ಮೂಲ ಅಧಿಕಾರದ ವ್ಯಾಪ್ತಿಗೆ ಒಳಪಡುವ ಅಂಶ

(A) ತನ್ನ ಅಧಿಕಾರ ವ್ಯಾಪ್ತಿಯನ್ನು ನಿರ್ಣಯಿಸುವುದು

(B) ರಾಷ್ಟ್ರಪತಿಗೆ ಸಲಹೆ ನೀಡುವುದು

(C) ಮೂಲಭೂತ ಹಕ್ಕುಗಳ ಉಲ್ಲಂಘನೆ ವಿವಾದಗಳು

(D) ನ್ಯಾಯಿಕ ವ್ಯವಹಾರಗಳನ್ನು ದಾಖಲೆ ಮಾಡುವುದು

8. ಹಣಕಾಸಿನ ಮಸೂದೆಯನ್ನು ವಿಧಾನ ಪರಿಷತ್ತು ತಡೆಹಿಡಿಯಬಹುದಾದ ಅವಧಿ

(A) 15 ದಿನಗಳು

(B) 10 ದಿನಗಳು

(C) 12 ದಿನಗಳು

(D) 14 ದಿನಗಳು

9. ರಾಜ್ಯ ಲೋಕಸೇವಾ ಆಯೋಗದ ರಚನೆಗೆ ಅವಕಾಶ ನೀಡಿರುವ ಸಂವಿಧಾನದ ವಿಧಿ

(A) 315 ನೇ ವಿಧಿ

(B) 323 ನೇ ವಿಧಿ

(C) 231 ನೇ ವಿಧಿ

(D) 168 ನೇ ವಿಧಿ

10. ರಾಜ್ಯ ವಿಧಾನ ಪರಿಷತ್ತಿಗೆ ನಾಮ ನಿರ್ದೇಶನ ಮಾಡುವ ರಾಜ್ಯಪಾಲರ ಅಧಿಕಾರ ವ್ಯಾಪ್ತಿ

(A) ಕಾರ್ಯಾಂಗ ಅಧಿಕಾರ

(B) ಶಾಸಕಾಂಗ ಅಧಿಕಾರ

(C) ಹಣಕಾಸಿನ ಅಧಿಕಾರ

(D) ನ್ಯಾಯಿಕ ಅಧಿಕಾರ

**II.** 11. ***A*-ಪಟ್ಟಿಯ ರಾಷ್ಟ್ರಗಳನ್ನು *B*-ಪಟ್ಟಿಯ ಚುನಾಯಿತ ಮನೆಗಳೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) ಬ್ರಿಟನ್ | (i) ಡಯಟ್ |
| (B) ಅಮೆರಿಕಾ | (ii) ರಾಷ್ಟ್ರೀಯ ಪಂಚಾಯತ್ |
| (C) ನೇಪಾಳ | (iii) ಪಾರ್ಲಿಮೆಂಟ್ |
| (D) ಜಪಾನ್ | (iv) ಜಡಿಯಾ ಸಂಸದ್ |
| (E) ಬಾಂಗ್ಲಾದೇಶ | (v) ನ್ಯಾಷನಲ್ ಅಸೆಂಬ್ಲಿ |
| | (vi) ಕಾಂಗ್ರೆಸ್ |
| | (vii) ತ್ಸೊಂಗ್‌ಡು |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಭಾರತ ಸಂವಿಧಾನ ರಚನಾ ಸಭೆಯ ಅಧ್ಯಕ್ಷರು ಯಾರು ?

13. ಭಾರತ ಸಂವಿಧಾನದ 'ಮ್ಯಾಗ್ನಕಾರ್ಟ್' ಎಂದು ಯಾವುದನ್ನು ಕರೆಯಲಾಗಿದೆ ?

14. ನಮ್ಮ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಯಾವ ದೇಶದ ಸಂವಿಧಾನದಿಂದ ಎರವಲು ಪಡೆಯಲಾಗಿದೆ ?

15. ಉದಾರವಾದಿ ತತ್ವಗಳನ್ನು ವ್ಯಾಖ್ಯಾನಿಸಿ.

16. ಭಾರತದ ರಾಷ್ಟ್ರಪತಿಗಳ ಅಧಿಕಾರಾವಧಿ ಎಷ್ಟು ವರ್ಷಗಳು ?

17. ಭಾರತದ ಸಂಸತ್ತಿನ ಕೆಳಮನೆ ಯಾವುದು ?

18. ಅವಿಶ್ವಾಸ ನಿರ್ಣಯ ಎಂದರೇನು ?

19. ಸರ್ವೋಚ್ಚ ನ್ಯಾಯಾಲಯ ನ್ಯಾಯಾಧೀಶರನ್ನು ಯಾರು ನೇಮಕ ಮಾಡುತ್ತಾರೆ ?

20. ರಾಜ್ಯ ಮಂತ್ರಿಮಂಡಲದ ಅಧ್ಯಕ್ಷತೆಯನ್ನು ಯಾರು ವಹಿಸುತ್ತಾರೆ ?

21. ರಾಜ್ಯಪಾಲರಿಗಿರುವ ವಿವೇಚನಾ ಅಧಿಕಾರವನ್ನು ವ್ಯಾಖ್ಯಾನಿಸಿ.

22. ರಾಜ್ಯ ಶಾಸಕಾಂಗದ ಶಾಶ್ವತ ಸದನ ಯಾವುದು ?

23. ವಿಧಾನಸಭೆಯನ್ನು ಜನತಾ ಸದನ ಎಂದು ಕರೆಯಲಾಗಿದೆ. ಏಕೆ ?

24. ರಾಜ್ಯದೊಳಗಿನ ಅತ್ಯುನ್ನತ ನ್ಯಾಯಾಲಯ ಯಾವುದು ?

25. ನ್ಯಾಯಿಕ ವಿಮರ್ಶೆ ಎಂದರೇನು ?

26. "ಗ್ರಾಮಪಂಚಾಯಿತಿಗಳು ಭಾರತದ ಸ್ವಾಯತ್ತ ಸರ್ಕಾರದ ತಳಹದಿಯಾಗಿವೆ." ಎಂದು ಹೇಳಿದವರು ಯಾರು ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**14 × 2 = 28**

27. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ ಎಂದರೇನು ?

28. ಸಂವಿಧಾನದ ಪ್ರಸ್ತಾವನೆಯಲ್ಲಿರುವ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.

29. ಶಿಕ್ಷಣ ಹಕ್ಕು ಕಾಯ್ದೆಯ ಮುಖ್ಯಾಂಶಗಳು ಯಾವುವು ?

30. ತುರ್ತು ಪರಿಸ್ಥಿತಿಯ ವಿಧಗಳಾವುವು ?

31. ರಾಜ್ಯನೀತಿ ನಿರ್ದೇಶಕ ತತ್ವಗಳ ಆಧಾರದಲ್ಲಿ ಜಾರಿಗೆ ತಂದಿರುವ ಕಾರ್ಯಕ್ರಮಗಳನ್ನು ಹೆಸರಿಸಿ.

32. ರಾಷ್ಟ್ರದ ಐಕ್ಯತೆ ಮತ್ತು ಭಾವೈಕ್ಯತೆಯನ್ನು ಬೆಳೆಸುವಲ್ಲಿ ನಮ್ಮ ಪಾತ್ರವೇನು ?

33. ಭಾರತದ ರಾಷ್ಟ್ರಪತಿಗಳನ್ನು ಹೇಗೆ ಚುನಾಯಿಸಲಾಗುತ್ತದೆ ?

34. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಒಂದು ಉದಾಹರಣೆಯೊಂದಿಗೆ ವಿವರಿಸಿ.

35. ರಾಜ್ಯಪಾಲರಾಗಲು ಇರಬೇಕಾದ ಅರ್ಹತೆಗಳು ಯಾವುವು ?

36. ಭಾರತದಲ್ಲಿ ದ್ವಿಸದನ ಶಾಸಕಾಂಗ ಪದ್ಧತಿಯನ್ನು ಹೊಂದಿರುವ ರಾಜ್ಯಗಳು ಯಾವುವು ?

37. ಕಂದಾಯ ನ್ಯಾಯಾಲಯಗಳು ಹೊಂದಿರುವ ಶ್ರೇಣಿಗಳನ್ನು ತಿಳಿಸಿ.

38. ಜಿಲ್ಲಾ ಪಂಚಾಯಿತಿಯ ಸ್ಥಾಯಿ ಸಮಿತಿಗಳು ಯಾವುವು ?

39. ರಾಜ್ಯ ಲೋಕಸೇವಾ ಆಯೋಗದ ಸದಸ್ಯರಾಗಲು ಇರಬೇಕಾದ ಅರ್ಹತೆಗಳೇನು ?

40. ಉಚ್ಚ ನ್ಯಾಯಾಲಯವು ಅಧೀನ ನ್ಯಾಯಾಲಯಗಳ ಮೇಲೆ ಹೇಗೆ ನಿಯಂತ್ರಣ ಹೊಂದಿರುತ್ತದೆ ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

41. ಭಾರತದ ಸಂವಿಧಾನವು ನಮಗೆ ನೀಡಿರುವ ಮೂಲಭೂತ ಹಕ್ಕುಗಳು ಯಾವುವು ?

42. ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿರುವ ಗಾಂಧಿವಾದದ ಅಂಶಗಳನ್ನು ಪಟ್ಟಿ ಮಾಡಿ.

43. ಲೋಕಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳೇನು ?

44. ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಾಗ ಸರ್ವೋಚ್ಚ ನ್ಯಾಯಾಲಯ ಹೊರಡಿಸುವ ಆಜ್ಞೆಗಳು ಯಾವುವು ?

45. ಹಳ್ಳಿಗಳ ಅಭಿವೃದ್ಧಿಗಾಗಿ ಗ್ರಾಮಪಂಚಾಯಿತಿಗಳು ಕೈಗೊಳ್ಳುವ ಕಾರ್ಯಕ್ರಮಗಳು ಯಾವುವು ?

46. ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳೇನು ?

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :** **1 × 4 = 4**

47. ಭಾರತದ ಸಂವಿಧಾನದ ಪ್ರಧಾನ ಲಕ್ಷಣಗಳನ್ನು ವಿವರಿಸಿ.

DO NOT WRITE ANYTHING HERE